ಕರ್ನಾಟಕ ಸರ್ಕಾರ

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ದಕ್ಷಿಣ ವಲಯ, ಮೈಸೂರು

E-mail Id : beo.mysoresouth@gmail.com ದೂರವಾಣಿ ಸಂಖ್ಯೆ : 0821-2334666

ಸಂಖ್ಯೆ:ಸಿ6 : ಶಾ.ಮಾ.ನ: 78 /2017-18 /1186 ದಿನಾಂಕ: 24.11.2017

## ಜ್ಞಾಪನ

ವಿಷಯ: -ಸೆಂಂಟ್ ಥಾಮಸ್ ಹಿರಿಯ ಪ್ರಾಥಮಿಕ ಶಾಲೆ, ವಿಶ್ವೇಶ್ವರನಗರ, ಮೈಸೂರು ಈ ಶಾಲೆಯ ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ:1]ನಿಮ್ಮ ಪ್ರಾಸ್ತಾವನೆ ಪತ್ರ ಸಂಖ್ಯೆ ಸ್ವೀಕೃತವಾದ ದಿನಾಂಕ:-25.07.2017
2]ಶಿಕ್ಷಣ ಸಂಂಯೋಜಕರ ಸ್ಥಳ ಪರಿಶೀಲನಾ ವರದಿ ದಿನಾಂಕ:-21.08.2017

### ಆದೇಶ

ಉಲ್ಲೇಖ [2] ರ ಶಿಕ್ಷಣ ಸಂಂಯೋಜಕರ ಸ್ಥಳಪರಿಶೀಲನಾ ಭೇಟಿ ವರದಿಯನ್ವಯ ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ 1983 ನಿಯಮ (38) ರ ರೀತ್ಯಾ, ಸೆಂಂಟ್ ಥಾಮಸ್ ಹಿರಿಯ ಪ್ರಾಥಮಿಕ ಶಾಲೆ, ವಿಶ್ವೇಶ್ವರನಗರ, ಮೈಸೂರು ಈ ಶಾಲೆಗೆ 2017-18 ರಿಂದ 2021-22 ನೇ ಸಾಲಿನವರೆಗೆ 1 ರಿಂದ 7 ನೇ ತರಗತಿವರೆಗೆ ಆಂಗ್ಲ ಮಾಧ್ಯಮದ ತಲಾ ಎರಡು ವಿಭಾಗಕ್ಕೆ ಈ ಕೆಳಕಂಡ ಷರತ್ತು ಮತ್ತು ಈಗಿನ ಹಾಗೂ ಆಗಿಂದ್ದಾಗ್ಗೆ ಹೊರಡಿಸುವ ಸರ್ಕಾರಿ ಆದೇಶಗಳ ಮೇರೆಗೆ ಯಾವುದೇ ಅನುದಾನವಿಲ್ಲದೇ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ ನವೀಕರಿಸಿದೆ.

### ಷರತ್ತು

1. ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
2. ಪ್ರತಿ ತರಗತಿಗಳಲ್ಲಿ ಮಕ್ಕಳ ಹಾಜರಾತಿ ನಿಯಮಕ್ಕಿಂತ ಕಡಿಮೆ ಇರಬಾರದು ಕನಿಷ್ಠ ವಿದ್ಯಾರ್ಥಿಗಳ ದಾಖಲಾತಿ/ ಹಾಜರಾತಿ ಸಂಖ್ಯಾ ಬಲವನ್ನು ಕಾಪಾಡಿಕೊಂಡು ಬರುವುದು.
3. ಸ್ಥಳಾವಕಾಶವನ್ನು ಹೆಚ್ಚಿಸಬೇಕು.ಸ್ವಂತಕಟ್ಟಡವನ್ನು ಹೊಂದಿರತಕದ್ದು ಮತ್ತು ಶೌಚಾಲಯ, ಕುಡಿಯುವ ನೀರು ವ್ಯವಸ್ಥೆ ಇರಬೇಕು
4. ಅಗತ್ಯಕ್ಕೆ ಅನುಗುಣವಾಗಿ ಪೀಠೋಪಕರಣ, ಪಾಠೋಪಕರಣ ಹಾಗೂ ಆಟದ ಮೈದಾನವನ್ನು ಒದಗಿಸುವುದು.
5. ನಿಗದಿತ ವಿದ್ಯಾರ್ಹತೆ ವಯೋಮಿತಿ ಹೊಂದಿದ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳುವುದು.
6. ವಿದ್ಯಾರ್ಥಿ ಸಂಖ್ಯೆಗಳಗನುಗುಣವಾಗಿ ಅಥವಾ ಸ್ಟಾಫ್ ಪ್ಯಾಟ್ರನ್ ಅನುಸಾರ ಕನಿಷ್ಟ ಶಿಕ್ಷಕರ ನೇಮಕ ಆಗಬೇಕು
7. ಸರ್ಕಾರದಿಂದ ನಿಗಧಿತವಾದ ಪಠ್ಯಕ್ರಮ ಅನುಸರಿಸುವುದು.
8. ಅನುದಾನ ಸಂಹಿತೆ ನಿಯಮ 15(1) ಪ್ರಕಾರ ಪ್ರತಿಯೊಂದು ತರಗತಿಗೆ ನಿಯಮಾನುಸಾರ ಸ್ಥಿರನಿಧಿ ಠೇವಣಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕಾರ್ಯದರ್ಶಿಯವರ ಜಂಟಿ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಡಿಪಾಸಿಟ್ ಖಾತೆಯಲ್ಲಿ ಇಟ್ಟಿರಬೇಕು. ಅವಧಿ ಮುಗಿದ ನಂತರ ಸ್ಟೆಬಿಲಿಟಿ ಫಂಡ್ ರಶೀದಿಯನ್ನು ನವೀಕರಿಸಬೇಕು.
9. ಪೂರ್ವಾನುಮತಿ ಇಲ್ಲದೆ ಹೆಚ್ಚುವರಿ ತರಗತಿಗಳನ್ನಾಗಲಿ, ವಿಭಾಗಗಳನ್ನಾಗಲಿ, ತೆರೆಯಕೂಡದು.
10. ಕಾಲಕಾಲಕ್ಕೆ ಹೊರಡಿಸಲಾದ ಸರ್ಕಾರಿ ಅದೇಶವನ್ನು ಪಾಲಿಸುವುದು.
11. ವಿಳಂಬಕ್ಕೆ ಅವಕಾಶ ನೀಡದೇ ಮಾನ್ಯತೆ ನವೀಕರಿಸಲು ಪ್ರಸ್ತಾವನೆ ಸಲ್ಲಿಸುವುದು.
12. ಪೂರ್ವಾನುಮತಿ ಇಲ್ಲದೆ. ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಬಾರದು. ಸರ್ಕಾರ ನಿರ್ಧರಿಸಿರುವ ಶುಲ್ಕವನ್ನು ಮಾತ್ರ ವಸೂಲಿ ಮಾಡತಕ್ಕದ್ದು.
13. ಶಾಲೆಯ/ಆಡಳಿತ ಮಂಡಳಿಯ ಹಿಂದಿನ ಸಾಲಿನವರೆಗೆ ಲೆಕ್ಕಪತ್ರವನ್ನು ನೋಂದಣಿ ಅಧಿಕಾರಿಗಳಿಗೆ ನೀಡಿ ಒಪ್ಪಿಗೆ ಪತ್ರ ಪಡೆದು ಕಳುಹಿಸಬೇಕು
14. ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು. ಇಲ್ಲದಿದ್ದಲ್ಲಿ ಶಾಲೆಯ ಮಂಜೂರಾತಿಯನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು.
15. ಶಾಲೆಯಲ್ಲಿ ಬೆಂಕಿ ಅಪಘಾತ, ವಿದ್ಯತ್ ಅಘಘಾತದಿಂದ ವಿದ್ಯಾರ್ಥಿಗಳಿಗೆ ರಕ್ಷಿಸಲು ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.
16. ಕಡ್ಡಾಯವಾಗಿ ಸಿ.ಸಿ ಕ್ಯಾಮರ ಅಳವಡಿಸುವುದು.
17. ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಗೃಹ ಇಲಾಖೆಯಿಂದ ಹೊರಡಿಸಿರುವ ಆದೇಶ ಸಂಖ್ಯೆ ಎಂ.ಎ.ಜಿ: 08/2014 ದಿನಾಂಕ: 31.07.2014 ರಲ್ಲಿ ಮಾರ್ಗ ಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು

ಕ್ಷೇತ್ರ ಶಿಕ್ಷಣಾಧಿಕಾರಿಗಳು
ದಕ್ಷಿಣವಲಯ ಮೈಸೂರು

ಗೆ.
ಕಾರ್ಯದರ್ಶಿಗಳು , ಸೆಂಂಟ್ ಥಾಮಸ್ ಹಿರಿಯ ಪ್ರಾಥಮಿಕ ಶಾಲೆ, ವಿಶ್ವೇಶ್ವರನಗರ, ಮೈಸೂರು